ಪಿ.ಡಬ್ಲ್ಯೂ- 1

**ದಿನಾಂಕಃ 25-02-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ** ಪ್ರತಿವಾದಿ ಪರ ಶ್ರೀ ಬಿಟಿಕೆ **ವಕೀಲರಿಂದ**

ಪ್ರತಿವಾದಿ ನನ್ನ ಹೆಂಡತಿಯ ತಮ್ಮ. ಅವರು ಅಣ್ಣ ತಮ್ಮಂದಿರು. ಮೂವರಿದ್ದು. ಇಬ್ಬರು ತೀರಿಕೊಂಡಿರುತ್ತಾರೆ. ಉಳಿದ ಮೂವರು. ಅಕ್ಕ ತಂಗಿಯರಿದ್ದು ಒಟ್ಟು ಆರು ಜನ ಇರುತ್ತಾರೆ. ಅವರುಗಳನ್ನು ಸದರಿ ದಾವೆಯಲ್ಲಿ ನೀವು. ಪಕ್ಷಿದಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ನಾವು. ದಾವೆಯನ್ನು ಹೂಡಿರುವುದಿಲ್ಲ. ಪ್ರತಿವಾದಿಗಳು ಹಾಕಿರುವ ದಾವೆಗೆ ನಾವು. ಪ್ರತ್ಯುತ್ತರ ನೀಡಿರುತ್ತೇವೆ. ಪ್ರತಿವಾದಿಯರ ಕುಟುಂಬದಲ್ಲಿ ಜಮೀನು ಮತ್ತು ಆಸ್ತಿಗಳು ಎಷ್ಟು ಇದ್ದವು ಎಂದರೆ ಸಾಕ್ಷಿ. ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್ ರವರು ಪ್ರತಿವಾದಿಗೆ. ದೊಡ್ಡಪ್ಪ ಆಗಬೇಕು. ಅವರು ಅಣ್ಣಪ್ಪ ಮತ್ತು ಮಂಜಪ್ಪ ಎಂದು ಇಬ್ಬರು ಮಕ್ಕಳಿರುತ್ತಾರೆ. ಮಂಜಪ್ಪ ರವರಿಗೆ ಮಕ್ಕಳು ಇರುವುದಿಲ್ಲ ಎಂದರೆ ಸರಿ. ಮಂಜಪ್ಪನ ಹೆಂಡತಿ ಹೆಸರು ಬಸ್ಸಮ್ಮ ಅಲಿಯಾಸ್ ಕಮಲಮ್ಮ ಆಗಿರುತ್ತದೆ.

ಮಂಜಪ್ಪ ರವರು ತೀರಿಕೊಂಡು ಹೋದ ಮೇಲೆ ಅವರ ಆಸ್ತಿಗಳು ಅವರ ಹೆಂಡತಿ ಹೆಸರಿಗೆ ಬಂದಿರುತ್ತದೆ ಎಂದರೆ. ಸಾಕ್ಷಿ ಎಲ್ಲಾ ಆಸ್ತಿಗಳು ಅವರ ಹೆಸರಿಗೆ ಬಂದಿರುವುದು ನನಗೆ ಗೊತ್ತಿರುವುದಿಲ್ಲ. ದಾವಾಸೊತ್ತು ಅವರ ಹೆಸರಿಗೆ ಬಂದಿರುತ್ತದೆ ಎಂದು ನುಡಿದಿರುತ್ತಾರೆ. ನಮ್ಮ ಮೂಲ ಚೆನ್ನಗಿರಿ ತಾಲ್ಲೂಕು ಬರಮನಹಳ್ಳಿ ಆಗಿರುತ್ತದ, ಮಂಜಪ್ಪ ರವರು ಕುಡಿತದಿಂದ ತೀರಿಹೋಗಿರುತ್ತಾರೆ. ಅವರ ಮರಣ ನಂತರ ಎಲ್ಲಾ ಕಾರ್ಯಗಳನ್ನು ಪ್ರತಿವಾದಿಯಾದ ಮಂಜುನಾಥ್ ಮಾಡಿರುತ್ತಾರೆ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿದಿದ್ದು ಮುಂದುವರಿದು ಎಲ್ಲ ಕಾರ್ಯಗಳನ್ನು ನಾನೇ ಮಾಡಿರುತ್ತೇನೆ. ಮಂಜಪ್ಪನ ಹೆಂಡತಿ ಕಮಲಮ್ಮ ದಿಃ 18-08-2021 ರಂದು ತೀರಿಹೋಗಿರುತ್ತಾರೆ. ಕಮಲಮ್ಮರವರಿಗೆ ಕಾಲು ಫ್ರಾಕ್ಚರ್ ಆಗಿದ್ದು, ನಂತರ ವಯಸ್ಸಾದ ಕಾರಣ.ಅವರು ಊಟ, ತಿಂಡಿ ಬಿಟ್ಟು. ಹಾಸಿಗೆ ಹಿಡಿದಿದ್ದು ಒಂದು ವರ್ಷಗಳ ಕಾಲ

ಹಾಸಿಗೆಯಲ್ಲೇ ಇದ್ದು, ನಂತರ ತೀರಿಹೋಗಿರುತ್ತಾರೆ. ವಿಲ್ ಬರೆದಿರುವುದನ್ನು ಕಮಲಮ್ಮ ಅವರು ತೀರಿಹೋಗಿ ಎಂಟು ತಿಂಗಳ ಕಾಲ ನನಗೆ ತಿಳಿದಿರುವುದಿಲ್ಲ, ನಂತರ ತಿಳಿದು ಬಂದಿರುತ್ತದೆ. ಸದರಿ ವಿಲ್ಲನ್ನು ತರಿಕೆರೆಯಲ್ಲಿ ಬರೆದಿರುತ್ತಾರೆ.ವಿಲ್ ಬರೆಯುವ ಕಾಲದಲ್ಲಿ ವಿಲ್ ಬರೆಯುವ ಕಾಲದಲ್ಲಿ ಕಮಲಮ್ಮನವರ ಮನಸ್ಥಿತಿಯೂ ಸಹ ಸರಿಯಿರಲಿಲ್ಲ ಎಂದರೆ ಸರಿಯಲ್ಲ. ವಿಲ್ ನಲ್ಲಿ ಬರೆದಿರುವ ಚಕಬಂದಿಗೂ ಹಾಗೂ ಅಸೆಸ್ಮೆಂಟ್ ಎಕ್ಸ್ ಟ್ರಾಕ್ ನಲ್ಲಿ ಇರುವ ಚೆಕ್ ಬಂದಿಗೂ ತಾಳೆ ಇರುವುದಿಲ್ಲ ಎಂದರೆ ಸರಿಯಲ್ಲ.ಸಾಕ್ಷಿ ಮುಂದುವರಿದು ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಪ್ರತಿವಾದಿಯು ಎಲ್ಲರೂ ಸೇರಿ ಅಳತೆ ಮಾಡಿರುತ್ತಾರೆ.

ಕಮಲಮ್ಮನವರ ವಯಸ್ಸು ಎಷ್ಟಾಗಿತ್ತು ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿದಿರುತ್ತಾರೆ. ವಿಲ್ ಬರೆಯುವ ಕಾಲದಲ್ಲಿ ಕಮಲಮ್ಮನವರಿಗೆ ಆರೋಗ್ಯ ಸರಿ ಇರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ಬಹಳ ಚೆನ್ನಾಗಿ ಇದ್ದರು ಎಂದು ನುಡಿದಿರುತ್ತಾರೆ. ವಿಲ್ ನಲ್ಲಿ ಸಾಕ್ಷಿದಾರರಾಗಿ ಸಹಿ ಮಾಡಿರುವ ಸಂತೋಷ್ ರವರು ನನಗೆ ತಿಳಿದಿರುವುದಿಲ್ಲ. ಇನ್ನೊಬ್ಬ ವಿಶಾಲಮ್ಮ. ಬದುಕಿದ್ದು ಅವರು ಎದ್ದು ಓಡಾಡುವ ಪರಿಸ್ಥಿತಿಯಲ್ಲಿ ಇರುವುದಿಲ್ಲ,ಸದರಿ ವಿಲ್ಲನ್ನು ಕಮಲಮ್ಮನವರು ಬರೆದಿರುವುದಿಲ್ಲ, ನೀವೇ ಸೃಷ್ಟಿ ಮಾಡಿಕೊಂಡಿರುತ್ತೀರಾ ಎಂದರೆ ಸರಿಯಲ್ಲ. ಕಮಲಮ್ಮನವರು ತೀರಿಹೋದಾಗ ಎಲ್ಲಾ ಕಾರ್ಯವನ್ನು ಯಾರು ಮಾಡಿರುತ್ತಾರೆ ಎಂದರೆ ಸಾಕ್ಷಿ ನಾನೇ ಮಾಡಿರುತ್ತೇನೆ ಎಂದು ನುಡಿದಿರುತ್ತಾರೆ. ಕಮಲಮ್ಮರವರ ಕಾರ್ಯವನ್ನು ಮಾಡುವ ಸಮಯದಲ್ಲಿ ಕೋವಿಡ್ ಕಾಲ ಇದ್ದು, ಪ್ರತಿವಾದಿಯು ಆ ದಿನ ತನ್ನ ಶೂ ನಿಂದ ನನಗೆ ಹಲ್ಲೆ ಮಾಡಿರುತ್ತಾರೆ. ಕಮಲಮ್ಮನವರ ಮರಣ ನಂತರ ಕಾರ್ಯಗಳನ್ನು ಪ್ರತಿವಾದಿಯೇ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದಾವಾಸ್ವತ್ತನ್ನು ನೀವು ಪಡೆದುಕೊಳ್ಳಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಾ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಬೇಕಾದ ಸ್ವತ್ತನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ

ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ನೀವುಎಲ್ಲಾ ರೀತಿಯಲ್ಲೂ ಬಲಾಢ್ಯರಿದ್ದು, ಎಲ್ಲಾ

ವಿಷಯ ತಿಳಿದಿದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**